**OS. No. 55/2022** **PW –1**

ಪ್ರಮಾಣೀಕರಿಸಲಾದ ದಿನಾಂಕಃ **02.07.2025.**

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಟಿ.ಜಿ.ವಿ. ವಕೀಲರಿಂದಃ</u>

ದಿಃ03.09.1994 ರಂದು ನಾನು ಶಿಕ್ಷಕಿನಾಗಿ ನೇಮಕಗೊಂಡಿರುತ್ತೇನೆ. ನನ್ನ ತಂದೆಯುವರು ಮೂಲತಃ ತಿಪಟೂರಿನ ತಾಲೂಕಿನ ಗಡಬನಹಳ್ಳಿಯವರು ಆಗಿರುತ್ತಾರೆ ಎಂದರೆ ಸರಿ. ಗಡಬನಹಳ್ಳಿಯಲ್ಲಿ 5 ಸ್ವತ್ತುಗಳು ಇದ್ದವು. ಅದು ಯಾವ ಸ್ವತ್ತುಗಳು ಎಂದು ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಸದರಿ ಸ್ವತ್ತುಗಳೆಲ್ಲವೂ ಮಾರಾಟ ಆಗಿರುತ್ತವೆ. ಯಾವ ಸಾಲಿನಲ್ಲಿ ಮಾರಾಟ ಆಗಿರುತ್ತವೆ ನೆನೆಪು ಇಲ್ಲ, ಸಾಕ್ಷಿಯು ಮುಂದುವರೆದು 1990 ರವರೆಗೂ ಮಾರಾಟ ಮಾಡಿರುತ್ತಾರೆ. ಎಷ್ಟು ಬೆಲೆಗೆ ಮಾರಾಟ ಆಗಿರುತ್ತದೆ ನನಗೆ ಗೊತ್ತಿಲ್ಲ ಎಂದರೆ ಸರಿ. ನಾನಾಗಲೀ ನನ್ನ ತಂಗಿಯಾಗಲೀ ಯಾವುದಾದರೂ ಪತ್ರ ಗಳಿಗೆ ಸಹಿ ಮಾಡಿರುತ್ತೀರಾ ಎಂದರೆ ಒಂದಕ್ಕೆ ಮಾಡಿರುತ್ತೇವೆ ಉಳಿದ ಪತ್ರ ಗಳ ಬಗ್ಗೆ ಗೊತ್ತಿಲ್ಲ. ಗಡಬನಹಳ್ಳಿಯಲ್ಲಿ ಇದ್ದಂತಹ ಸ್ವತ್ತುಗಳ ಸಂಬಂಧ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ, ಅಗತ್ಯವಿದ್ದಲ್ಲಿ ಸಲ್ಲಿಸುತ್ತೇನೆ. ನಾನು ಜನಿಸುವ ಕಾಲಕ್ಕೆ ನನ್ನ ತಂದೆ ಗಡಬನಹಳ್ಳಿಯಲ್ಲಿ ವಾಸವಿದ್ದರು. ನನ್ನ ತಮ್ಮ ಜನಿಸುವ ಕಾಲಕ್ಕೆ ಚಿ.ನಾ ಹಳ್ಳಿ ತಾ, ಹಂದನಕೆರೆ ಹೋ, ಎರಕಟ್ಟೆ ಗ್ರಾಮಕ್ಕೆ ಬಂದಿದ್ದೆವು.

ನನ್ನ ತಾಯಿ ಚಿ.ನಾ ಹಳ್ಳಿ ತಾ, ತರಬೇನಹಳ್ಳಿ ಗ್ರಾಮದವರು ಎಂದರೆ ಸರಿ . ನನ್ನ ತಾಯಿಯವರನ್ನು ಒಳಗೊಂಡು 4 ಜನ ಹೆಣ್ಣುಮಕ್ಕಳು ಎಂದರೆ ಸರಿ . ನನ್ನ ತಾತನಿಗೆ ಕೇವಲ ಹೆಣ್ಣುಮಕ್ಕಳಿದ್ದ ಕಾರಣ ಅವರ ವಿವಾಹ ಮಾಡಿದ ನಂತರ ಸ್ವತ್ತುಗಳನ್ನು ಮಾರಾಟ ಮಾಡಿ ಹೆಣ್ಣುಮಕ್ಕಳಿಗೆ ಸಮನಾಗಿ ಹಣವನ್ನು ಹಂಚಿರುತ್ತಾರೆ ಎಂದರೆ , ನನ್ನ ತಾಯಿಗೆ ಒಂದು ಬಾರಿ ರೂ.4000/- ನನ್ನ ತಾಯಿಯ ಭಾಗಕ್ಕೆಂದು ಮತ್ತು ಇನ್ನೊಂದು ಬಾರಿ ನನ್ನ ತಾತನನ್ನು ನೋಡಿಕೊಳ್ಳುವ ಸಂಬಂಧ ರೂ 5000/- ಕೊಟ್ಟಿರುತ್ತಾರೆ. ನನ್ನ ತಾತ ಇನ್ನು ಹೆಚ್ಚು ಮೊತ್ತದ ಹಣವನ್ನು ನನ್ನ ತಾಯಿಗೆ ನೀಡಿದ್ದು ಸದರಿ ಹಣದಿಂದ ದಾವಾ ಸ್ವತ್ತುಗಳನ್ನು ಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಕ್ರಯ ಪತ್ರ ಗಳನ್ನು ಹಾಜರು ಪಡಿಸಿರುವುದಿಲ್ಲ ಅಗತ್ಯವಿದ್ದಲ್ಲಿ ಹಾಜರುಪಡಿಸುತ್ತೇನೆ .

ನಾನು 1994 ರಲ್ಲಿ ಶಿಕ್ಷಕಿಯಾಗಿ ನೇಮಕಗೊಂಡ ಕಾಲಕ್ಕೆ ನನಗೆ ಮಾಹೆಯಾನೆ ರೂ.2800/- ಸಂಬಳ ಬರುತ್ತಿತ್ತು. ನನ್ನ ವಿವಾಹ 1987 ರಲ್ಲಿ ಆಗಿರುತ್ತದೆ ಎಂದರೆ ಸರಿ. ನನ್ನ ಗಂಡ ಸರ್ಕಾರಿ ಕೆಲಸದಲ್ಲಿ ಇರಲಿಲ್ಲ , ಗುತ್ತಿಗೆ ಆಧಾರದ ಮೇಲೆ ಕೆಲಸ

ಮಾಡುತ್ತಿದ್ದರು . ನನಗೆ 1998 ರಲ್ಲಿ ಹೃದಯ ಸಂಬಂಧ ಶಸ್ತ್ರಚಿಕಿತ್ಸೆಯಾಗಿರುತ್ತದೆ ಎಂದರೆ ಸರಿ. ಮುಂದುವರೆದು ಇನ್ನೂ 2 ಬಾರಿ ಶಸ್ತ್ರಚಿಕಿತ್ಸೆಗೆ ಒಳಗಾಗಿರುತ್ತೇನೆ ಎಂದರೆ ಸರಿ. ಸದರಿ ಶಸ್ತ್ರಚಿಕಿತ್ಸೆಗಳಿಗೆ ಬಹಳಷ್ಟು ಹಣ ವೆಚ್ಚವಾಗಿರುತ್ತದೆ ಎಂದರೆ ಸರ್ಕಾರದಿಂದ ವೆಚ್ಚವಾದ ಹಣ ಮರುಪಾವತಿಯಾಗಿರುತ್ತದೆ. ಈ ಸಂಬಂಧ ದಾಖಲಾತಿಗಳನ್ನು ಒದಗಿಸುತ್ತೇನೆ.

ಗಡಬನಹಳ್ಳಿಯಲ್ಲಿನ ಆಸ್ತಿಯನ್ನು ಮಾರಾಟ ಮಾಡಿ ಆ ಹಣದಿಂದ ನನ್ನ ತಂದೆ ನನಗೆ ಬೆಳಗುಲಿ ಗ್ರಾಮದಲ್ಲಿ ಸ.ನಂ. 411 ರಲ್ಲಿ 4 ಎಕರೆ ಜಮೀನು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ಬೆಳಗುಲಿ ಗ್ರಾಮದ ಸ.ನಂ.326 ರ 2 ಎಕರೆ ಜಮೀನು ನನ್ನ ತಂದೆ ನನಗೆ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ . ಸಂಪಿಗೆ ಗ್ರಾಮದ ಸ.ನಂ.152/2 ರ 1.18 ಎಕರೆ ಜಮೀನು ನನ್ನ ತಂದೆ ನನಗೆ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ . ಸದರಿ ಸ್ವತ್ತುಗಳನ್ನು ಕೊಳ್ಳಲು ನನಗೆ ಶಕ್ತಿ ಇರಲಿಲ್ಲ ನನ್ನ ತಂದೆಯವರು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ಗಂಡ 2000 ನೇ ಇಸವಿಯಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. 2 ನೇ ವಾದಿಗೆ 1997 ರಲ್ಲಿ ವಿವಾಹ ಆಗಿರುತ್ತದೆ ಎಂದರೆ ಸರಿ, ಮುಂದುವರೆದು, ನಾನು ನೆರವೇರಿಸಿರುತ್ತೇನೆ ಎಂದು ನುಡಿದಿರುತ್ತಾರೆ . ನನ್ನ ತಂಗಿ ಗೃಹಿಣಿ ಎಂದರೆ ಸರಿ. ಅವರಿಗೆ ಸಾಕಷ್ಟು ವರಮಾನ ಇರುವುದಿಲ್ಲ ಎಂದರೆ, ಅವರ ಗಂಡ ಸಾಕಷ್ಟು ವರಮಾನ ಹೊಂದಿರುತ್ತಾರೆ, ಈ ಸಂಬಂಧ ಅವರೇ ದಾಖಲಾತಿ ಒದಗಿಸುತ್ತಾರೆ. ನನ್ನ ತಂದೆ 2 ನೇ ವಾದಿಗೆ ಸ.ನಂ.84/2 ರಲ್ಲಿ 1 ಎಕರೆ , ಸ.ನಂ.76 ರಲ್ಲಿ 1 ಎಕರೆ 7 ½ ಗುಂಟೆ ಮತ್ತು ಸ.ನಂ. 77 ರಲ್ಲಿ 2. ಎಕರೆ 32 ½ ಗುಂಟೆ ಎರೆಕಟ್ಟೆ ಗ್ರಾಮದಲ್ಲಿ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ನನ್ನ ಹೆಸರಿನಲ್ಲಿ ಮತ್ತು ನನ್ನ ತಂಗಿಯ ಹೆಸರಿನಲ್ಲಿ ಇರುವ ಸ್ವತ್ತುಗಳೆಲ್ಲವೂ ಒಟ್ಟು ಕುಟುಂಬದ ಸ್ವತ್ತುಗಳು ಎಂದರೆ ಸರಿಯಲ್ಲ. ದಾವಾ ಸ್ವತ್ತು ಐಟಂ ನಂ.1 ರಿಂದ 3 ನನ್ನ ತಾಯಿಯ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ಐಟಂ ನಂ.4 1 ನೇ ವಾದಿಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ.

<u>ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚಿಸಿದೆ)

ಓ.ಹೇ.ಕೇ.ಸರಿ ಇದೆ

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು, ಚಿ.ನಾ.ಹಳ್ಳಿ